ತಾರೀಖು 17ನೇ ಜನವರಿ 1885.

ನಂ. 208.—ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲ್ ತಾಲ್ಲೂಕು ಅಮಲ್ದಾರ್ ಕುಮಾರಸಾಮಿ ಮೊದಲಿಯಾರ್ರಿಗೆ, ಸ್ಯ 1884ನೇ ಇಸವಿ ಡಿಸಂಬರ್ 6ನೇ ಮಕ್ತುಂ 5063—107ನೇ ನಂಬರುಳ್ಳ ಈ ಆಫೀಸ್ ಫ್ರೊಸೀಡಿಂಗ್ಸಿನ ಷರತ್ತುಗಳ ಮೇರಿಗೆ, 15 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಜನವರೀ 1885.

ನಂ. 210.—ಹಾಸನದ ಸಬ್ ಡಿವೀಜ್ಞ್ ಅರಸೀಕೆರೆ ತಾಲ್ಲೂಕು ಅಮಲ್ದಾರ್ ಸಿ. ಡಿ. ರಾಮಸ್ವಾಮಯ್ಯನವರಿಗೆ, 1884ನೇ ಇಸವಿ ನವಂಬರ್ 28ನೇ ಮಕ್ತುಂ ಲಾಗಾಯತು 15 ದಿವಸಗಳ ಕಾಹಿಲೆ ರಜಾ ಕೊಡಲ್ಪಟ್ಟಿರುತ್ತೆ.

ಬವೋಜೀಬ್ ಹುಕುಂ,

ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ಪೋಲೀಸ್ ಇಲಾಖೆ.

ತಾರೀಖು 21ನೇ ಜನವರೀ 1885.

ಇದರಡೀಕಂಡ ರೆವಿನ್ಯೂ ಅಸಿಸ್ಟೆಂಟ್ ಕಮ್ಮಿಷನರ್‌ಗಳು, ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರುಗಳಾಗಿ ಮೊಕರರ್ರಾಡಲ್ಪಟ್ಟು ಅವರ ಹೆಸರಿಗೆ ಯದುರಾಗಿ ಕಾಣಿಸಿರುವ ಡಿಸ್ಟ್ರಿಕ್ಟ್‌ಗಳಿಗೆ ನೇಮಿಸಲ್ಪಟ್ಟಿರುತ್ತಾರೆ.

ಮೆಸ್ಟರ್ ಕೃಷ್ಣಯ್ಯಂಗಾರ್ರು	.. ..	ಬೆಂಗಳೂರು ಡಿಸ್ಟ್ರಿಕ್ಟ್‌ಗೆ
ಮೆ|| ಜಿ. ರಘುನಾಥರಾಯರು	.. ..	ಕೋಲಾರ ಡಿಟೋ.
ಮೆ|| ಯ್ಯ. ಕೃಷ್ಣರಾಯರು ಕೂಜ್ಲಿ ಉದ್ಯೋಗದ ಮೇಲೆ ಹೋಗತಕ್ಕದ್ದು.		ತುಮಕೂರ ಡಿಟೋ.
ಮೆ|| ಸಿ. ಮೊದಯ್ಯನವರು	.. ..	ಮೈಸೂರು ಡಿಟೋ.
ಮೆ|| ಸೈಯದ್ ನಸೆರುದ್ದೀರ್ರು	.. ..	ಶಿವಮೊಗ್ಗಾ ಡಿಟೋ.
ಮೆ|| ಜಿ. ಕೆ. ವೆಂಕಟವರದಯ್ಯಂಗಾರ್ರು	.. ..	ಕಡೂರು ಡಿಸ್ಟ್ರಿಕ್ಟ್‌ಗೆ.

ಹುಕ್ಕುಂ ಬವೋಜೀಬ್,

ಎಸ್. ವೆಂಕಟವರದಯ್ಯಂಗಾರ್,
ಅ|| ಸೆಕ್ರಟೇರಿ.

ಪಬ್ಲಿಕ್ ವರ್ಕ್ಸ್ ಇಲಾಖೆ.

ನಂ. 150—24. ತಾರೀಖು 15ನೇ ಜನವರೀ 1885.

ಯಕ್ಜಿಕ್ಯೂಟಿವ್ ಇಂಜನಿಯರ್ ಮೆ|| ವಿ. ಹೆಚ್. ಕರವಿಯವರು, ಮಾಹೆ ಮಜಕೂರು 6ನೇ ಮಕ್ತುಂ ಮಧ್ಯಾನ್ಹಾತ್ಪರ ಯಕ್ಜಿಕ್ಯೂಟೀವ್ ಇಂಜನಿಯರ್ ಮೆ|| ಜೇಲಿಯವರಿಂದ ಮೈಸೂರು ಡಿವಿಜನ್ನಿನ ಚಾರ್ಜನ್ನು ವಹಿಸಿರುತ್ತಾರೆ.

ಸಿ. ಹೆಚ್. ಯಂ. ಕ್ಲೆಸಿಂಗ್‌ಟನ್, ಕೆಪ್ಟನ್ ಆರ್ ಈ.
ಸೆಕ್ರಟೇರಿ ಮೈಸೂರು ಗವರ್ನಮೆಂಟ್.